ನಿಮ್ಮೊಡನೆ

# ಹಿಂದಿ, ಸಂಸ್ಕೃತ 'ಹೇರಿಕೆ' ಸರಿಯಲ್ಲ

ರಾಜ್ಯದ್ದಲ್ಲದ ಯಾವುದೇ ಭಾಷೆಗಳ ಕಲಿಕೆಯನ್ನು ತ್ರಿಭಾಷಾ ಸೂತ್ರದಡಿ ಕಡ್ಡಾಯಗೊಳಿಸಿ ರಾಜ್ಯಗಳ ಮೇಲೆ ಹೇರುವುದು ಸರಿಯಲ್ಲ. ತಮಗೆ ಇಷ್ಟವಿರುವ ಭಾಷೆಗಳನ್ನು ಕಲಿಯುವ ವಿದ್ಯಾರ್ಥಿಗಳ ಮತ್ತು ಪೋಷಕರ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬೇಡಿ.

ಸಿಬಿಎಸ್‌ಇ (ಸೆಕೆಂಡರಿ ಶಿಕ್ಷಣದ ಕೇಂದ್ರೀಯ ಮಂಡಳಿ)ಯು ಹತ್ತನೇ ತರಗತಿಯ ಬೋರ್ಡ್ ಪರೀಕ್ಷೆಯನ್ನು ಮರಳಿ ಕಡ್ಡಾಯಗೊಳಿಸಲು ನಿರ್ಧರಿಸಿದೆ. ಜತೆಗೇ ತ್ರಿಭಾಷಾ ಸೂತ್ರವನ್ನೂ ಜಾರಿಗೊಳಿಸಲು ಹೊರಟಿದೆ. ಜನರಿಂದ ತೀವ್ರ ವಿರೋಧ ಬಂದ ಹಿನ್ನೆಲೆಯಲ್ಲಿ ಐದು ವರ್ಷಗಳ ಹಿಂದೆ ಕೈಗೊಂಡಿದ್ದ ಐಚ್ಛಿಕ ಪರೀಕ್ಷೆಯ ನೀತಿಯನ್ನು ಕೈಬಿಡಲು ನಿರ್ಧರಿಸಿದೆ. ಹತ್ತನೇ ತರಗತಿಯ ಬೋರ್ಡ್ ಪರೀಕ್ಷೆಯನ್ನು ಕಡ್ಡಾಯಗೊಳಿಸುವುದು ಮತ್ತು ಐದು ವರ್ಷಗಳ ಹಿಂದಿನ ಸಿಸಿಇ (ಸತತ ಮತ್ತು ಸಮಗ್ರ ಮೌಲ್ಯಮಾಪನ) ಪದ್ಧತಿಯನ್ನು ಕೈಬಿಡುವುದು ಸ್ವಾಗತಾರ್ಹ ನಿರ್ಧಾರ. ಆದರೆ ತ್ರಿಭಾಷಾ ಸೂತ್ರವನ್ನು ಜಾರಿಗೆ ತರುವ ಮೂಲಕ ಸಿಬಿಎಸ್‌ಇ, ಜನವಿರೋಧಿ ನಿಲುವನ್ನು ತಳೆದಿದೆ ಎನ್ನುವುದು ನಿಸ್ಸಂಶಯ. ಅದರಲ್ಲೂ ಹಿಂದಿ ಮತ್ತು ಸಂಸ್ಕೃತ ಭಾಷೆಗಳನ್ನು ಎಲ್ಲ ರಾಜ್ಯಗಳ ಮೇಲೆ ಹೇರುವ ರಾಜಕೀಯ ಹುನ್ನಾರವೊಂದು ಸೂತ್ರದ ಹಿಂದೆ ಇದೆ ಎನ್ನುವುದು ಖಚಿತ. ಈ ತ್ರಿಭಾಷಾ ನೀತಿ ಶೈಕ್ಷಣಿಕ ಮಟ್ಟದಲ್ಲಿ ತೀವ್ರ ಪ್ರತಿರೋಧಕ್ಕೆ ಕಾರಣವಾಗಲಿದ್ದು, ಶೈಕ್ಷಣಿಕ ಪರಿಸರವನ್ನು ರಾಜಕೀಕರಣಗೊಳಿಸುವುದು ಖಂಡಿತಾ.

ಬೋರ್ಡ್ ಪರೀಕ್ಷೆಯನ್ನು ಕಡ್ಡಾಯಗೊಳಿಸುವ ಬಗ್ಗೆ ಸಿಬಿಎಸ್‌ಇ ಮಂಡಳಿಯು ಶಿಕ್ಷಕರ ಅಭಿಪ್ರಾಯವನ್ನು ಕೇಳಿದ್ದು ಒಳ್ಳೆಯದೇ. ಶೇಕಡಾ 80ರಷ್ಟು ಶಿಕ್ಷಕರು ಹತ್ತನೇ ತರಗತಿಯ ಬೋರ್ಡ್ ಪರೀಕ್ಷೆಯನ್ನು ಕಡ್ಡಾಯಗೊಳಿಸಬೇಕೆಂದು ಅಭಿಪ್ರಾಯ ಪಟ್ಟಿದ್ದರೆ, ಶೇಕಡಾ 66ರಷ್ಟು ಶಿಕ್ಷಕರು ಕಡ್ಡಾಯ ಪರೀಕ್ಷೆಯ ನಿರ್ಧಾರವನ್ನು ಆಯಾ ರಾಜ್ಯಗಳಿಗೆ ಬಿಡುವುದನ್ನು ವಿರೋಧಿಸಿದ್ದರು ಎನ್ನಲಾಗಿದೆ. ಸತತ ಮತ್ತು ಸಮಗ್ರ ಮೌಲ್ಯಮಾಪನದ (ಸಿಸಿಇ) ಪದ್ಧತಿಗೆ ಶಿಕ್ಷಕರಲ್ಲಿ ಸಾಕಷ್ಟು ಪೂರ್ವಸಿದ್ಧತೆ ಮತ್ತು ತರಬೇತಿ ಇರಲಿಲ್ಲ ಎನ್ನುವುದು ಇದರಿಂದ ಸಾಬೀತಾಗಿದೆ. ಬಹುತೇಕ ರಾಜ್ಯ ಸರಕಾರಗಳೂ ಹತ್ತನೇ ತರಗತಿಯ ಬೋರ್ಡ್ ಪರೀಕ್ಷೆಗೆ ಬೆಂಬಲ ನೀಡಿದ್ದವು. ಬಹುಶಃ ಸಿಸಿಇ ಪದ್ಧತಿಯನ್ನು ಜಾರಿಗೆ ತರಲು ಸೂಕ್ತ ವಾತಾವರಣ ಇನ್ನೂ ರೂಪುಗೊಂಡಿಲ್ಲ ಎನ್ನಬಹುದು. ಅದೇನೇ ಇದ್ದರೂ ಹೆಚ್ಚುತ್ತಿದ್ದ ಶೈಕ್ಷಣಿಕ ಗೊಂದಲಗಳ ಹಿನ್ನೆಲೆಯಲ್ಲಿ ಹತ್ತನೇ ತರಗತಿಯ ಬೋರ್ಡ್ ಪರೀಕ್ಷೆಯನ್ನು ಮರಳಿ ತರುವುದು ಅನಿವಾರ್ಯವೇ ಆಗಿತ್ತು.

ತ್ರಿಭಾಷಾ ಸೂತ್ರದ ಹಿಂದೆ ಇರುವುದು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷದ ರಾಜಕೀಯ ನಿಲುವಿನ ಪ್ರಭಾವ ಎನ್ನುವುದು ಮೇಲ್ನೋಟಕ್ಕೇ ಎದ್ದು ಕಾಣುತ್ತದೆ. ಹತ್ತನೇ ತರಗತಿಯವರೆಗೆ ಉತ್ತರ ಭಾರತದ ರಾಜ್ಯಗಳಲ್ಲಿ ಸಂಸ್ಕೃತವನ್ನು ಮತ್ತು ದಕ್ಷಿಣದ ರಾಜ್ಯಗಳಲ್ಲಿ ಹಿಂದಿ ಭಾಷೆಯನ್ನು ಕಡ್ಡಾಯಗೊಳಿಸಿರುವುದು ಜನರಿಗೆ ಇಷ್ಟವಿಲ್ಲದ ಭಾಷೆಯನ್ನು ಅವರ ಮೇಲೆ ಹೇರುವ ಹುನ್ನಾರವೇ ಸರಿ. ವಾಸ್ತವವಾಗಿ ತ್ರಿಭಾಷಾ ಸೂತ್ರವೆಂದರೆ ಒಂದು ಪ್ರಾದೇಶಿಕ ಭಾಷೆ, ಇಂಗ್ಲಿಷ್ ಮತ್ತು ಇನ್ನೊಂದು ಆಧುನಿಕ ಭಾರತೀಯ ಭಾಷೆಯನ್ನು ಮೂರನೆ ಭಾಷೆಯಾಗಿ ಐಚ್ಛಿಕವಾಗಿ ಕಲಿಯುವ ಅವಕಾಶ. ಆದರೆ ಸಿಬಿಎಸ್‌ಇ ಯ ಈಗಿನ ನಿಲುವು ನೋಡಿದರೆ, ಆಯಾ ರಾಜ್ಯಗಳ ಮತ್ತು ಶಾಲೆಗಳ ಈ ಹಕ್ಕನ್ನು ಕಸಿದುಕೊಳ್ಳುವ ಯತ್ನದಂತೆ ಕಾಣುತ್ತಿದೆ. ಸಂಸ್ಕೃತ ತ್ರಿಭಾಷಾ ಸೂತ್ರದ ಅಡಿಯಲ್ಲಿ ಬರುವುದೇ ಇಲ್ಲ. ನಿಜಕ್ಕೂ ಉತ್ತರ ಭಾರತದಲ್ಲಿನ ಶಾಲೆಗಳಲ್ಲಿ ದಕ್ಷಿಣ ಭಾರತದ ಒಂದು ಆಧುನಿಕ ಭಾಷೆಯನ್ನು ಮೂರನೆಯ ಭಾಷೆಯಾಗಿ ಕಲಿಸುವ ಅವಶ್ಯಕತೆ ಈಗ ಹಿಂದೆಂದಿಗಿಂತ ಹೆಚ್ಚಾಗಿದೆ. ದಕ್ಷಿಣ ಭಾರತದಲ್ಲಿ ಹೇರಳವಾಗಿರುವ ಉದ್ಯೋಗ ಅವಕಾಶಗಳಿಗೆ ಉತ್ತರ ಭಾರತದ ಯುವಕರು ಲಗ್ಗೆಯಿಡುತ್ತಿರುವ ಹಿನ್ನೆಲೆಯಲ್ಲೂ ಇದು ಅನಿವಾರ್ಯ ಎನ್ನಬಹುದಾದ ಕ್ರಮ. ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಒಂದು ಯೂರೋಪಿಯನ್ ಭಾಷೆಯನ್ನು ಮೂರನೆಯ ಭಾಷೆಯಾಗಿ ಕಲಿಯುವ ಅವಕಾಶವಿತ್ತು. ಎರಡು ವರ್ಷಗಳ ಹಿಂದೆ ಇದನ್ನು ತಪ್ಪಿಸಿ ಸಂಸ್ಕೃತವನ್ನು ಹೇರುವ ಯತ್ನ ನಡೆದಾಗ ತೀವ್ರ ಪ್ರತಿರೋಧ ಉಂಟಾಗಿತ್ತು ಎನ್ನುವುದನ್ನು ಇಲ್ಲಿ ನೆನಪಿಸಿಕೊಳ್ಳುವುದು ಒಳ್ಳೆಯದು. ಈಗಲೂ ಸಂಸ್ಕೃತವನ್ನು ಹೇರುವ ಈ ಯತ್ನಕ್ಕೆ ವಿರೋಧ ಬರುವುದು ಖಂಡಿತ. ದಕ್ಷಿಣದ ರಾಜ್ಯಗಳಲ್ಲಿ ಹಿಂದಿ ಭಾಷೆಯನ್ನು ಹೇರುವ ಯತ್ನವೂ ಉಗ್ರ ಪ್ರತಿಭಟನೆಗೆ ಕಾರಣವಾಗಲಿದೆ. ಕೇಂದ್ರ ಸರಕಾರದ ನೇತೃತ್ವವನ್ನು ವಹಿಸಿರುವ ಪಕ್ಷ ತನ್ನ ರಾಜಕೀಯ ನಿಲುವುಗಳನ್ನು ಶೈಕ್ಷಣಿಕ ಪಠ್ಯಗಳ ಮೂಲಕ ಈಡೇರಿಸಿಕೊಳ್ಳಲು ಹೊರಟಿರುವುದು ಎಳ್ಳಷ್ಟೂ ಸರಿಯಲ್ಲ.

ಕೇಂದ್ರ ಮಾನವ ಸಂಪನ್ಮೂಲ ಸಚಿವ ಪ್ರಕಾಶ್ ಜಾವ್ಡೇಕರ್ ಅವರು "ಯಾವುದೇ ಭಾಷೆಯನ್ನು ಯಾವುದೇ ರಾಜ್ಯದ ಮೇಲೆ ಹೇರುವ ಪ್ರಶ್ನೆಯೇ ಇಲ್ಲ" ಎಂದು ಸ್ಪಷ್ಟನೆ ನೀಡಿದ್ದರೂ ತ್ರಿಭಾಷಾ ಸೂತ್ರದ ನಿಯಮಗಳನ್ನು ಗಮನಿಸಿದರೆ ಈ ಹೇಳಿಕೆಯನ್ನು ನಂಬಲಾಗುವುದಿಲ್ಲ. ಈಗ ಉಗ್ರ ಭಾಷಾ ಚಳವಳಿಗಳ ಕಾಲ ಸರಿದುಹೋಗಿದೆ ಎನ್ನುವುದು ನಿಜವೇ. ಆದರೆ ರಾಜ್ಯಗಳ ಸ್ಥಳೀಯ ಭಾಷಾ ಅಸ್ಮಿತೆಯ ಗುಣಗಳನ್ನು ಕೇಂದ್ರ ಸರಕಾರವು ನಿರ್ಲಕ್ಷಿಸುವುದು ಖಂಡಿತಾ ತಪ್ಪು. ಬೇರೆ ಭಾಷೆಗಳನ್ನು ರಾಜ್ಯಗಳ ಮೇಲೆ ಹೇರುವುದು ಭಾಷಾ ವೈಷಮ್ಯಕ್ಕೂ ಕಾರಣವಾಗಬಹುದು. ರಾಜ್ಯಗಳ ಮಧ್ಯೆ ಈಗಾಗಲೇ ಹಲವು ಸಮಸ್ಯೆಗಳಿವೆ. ಅವುಗಳ ಜತೆಗೆ ಭಾಷಾಂಧತೆಯ ಸಮಸ್ಯೆಯೂ ಉಂಟಾಗುವುದು ಬೇಡ. ಭಾಷೆ ಕಲಿಕೆಯನ್ನು ಆಯಾ ರಾಜ್ಯಗಳ ವಿದ್ಯಾರ್ಥಿಗಳು ಮತ್ತು ಅವರ ಪೋಷಕರ ಐಚ್ಛಿಕ ನಿರ್ಧಾರಕ್ಕೆ ಬಿಡುವುದು ರಾಜಕೀಯ ಪ್ರಬುದ್ಧತೆಯ ಲಕ್ಷಣವೂ ಹೌದು.



ಈಶ್ವರ್

■ ಬಿ.ಎಂ.ಹನೀಫ್